**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ.**

**ಸಿ.ಸಿ.ನಂ. 1014/2021**
**ದಿನಾಂಕಃ 17.05.2023**

**ಫಿರ್ಯಾದಿಃ-** ಪಾಂಡಾವಪುರ ಠಾಣಾ ಪೊಲೀಸರು

ಃ ವಿರುದ್ಧ ಃ

**ಆರೋಪಿಗಳುಃ** **1.** ಶಿವಕುಮಾರ್.ಕೆ (37)
ಬಿನ್ ಕೃಷ್ಣೇಗೌಡ,
ವಾಸಃ ಶಿವಳ್ಳಿ ಗ್ರಾಮ,
ದುದ್ದ ಹೋಬಳಿ,
ಮಂಡ್ಯ ತಾಃ ಮಂಡ್ಯ.

**2.** ಶಿಲ್ಪರಾಣಿ.ಕೆ (31)
ಕೋಂಃ ಮೋಹನ್ ಕುಮಾರ್,
ವಾಸಃ ವಿ.ವಿ.ನಗರ ಗ್ರಾಮ,
ಪಾಂಡವಪುರ ತಾಃ ಮಂಡ್ಯ.

**3.** ಕೃಷ್ಣೇಗೌಡ (63)
ಬಿನ್ ಸಿದ್ದೇಗೌಡ,
ವಾಸಃ ಶಿವಳ್ಳಿ ಗ್ರಾಮ,
ದುದ್ದ ಹೋಬಳಿ,
ಮಂಡ್ಯ ತಾಃ ಮಂಡ್ಯ.

**4.** ರುಕ್ಮಿಣಿ ಉಃ ಚಿಕ್ಕ ಬೋರಿ (50)
ಕೋಂಃ ಕೃಷ್ಣೇಗೌಡ,
ವಾಸಃ ಕನಗೋನಹಳ್ಳಿ ಗ್ರಾಮ,
ಮೇಲುಕೋಟೆ ಹೋಬಳಿ,
ಪಾಂಡವಪುರ ತಾಃ ಮಂಡ್ಯ.

**6.** ಪಾರ್ವತಿ ಕೋಂಃ ಮಹಾದೇವ,
ವಾಸಃ ಶಿವಳ್ಳಿ ಗ್ರಾಮ,
ದುದ್ದ ಹೋಬಳಿ,
ಮಂಡ್ಯ ತಾಃ ಮಂಡ್ಯ.

## ದೋಷಾರೋಪಣೆ

**ಶ್ರೀ ಕಿಶೋರ್ ಕುಮಾರ್ ಕೆ.ಎನ್. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಪಾಂಡವಪುರ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಒಳಪಡಿಸುವುದೇನೆಂದರೆ,**

ನಿಮ್ಮ ಮೇಲೆ ಹೊರಿಸುವ ಆರೋಪಣೆ ಏನೆಂದರೆಃ-

**ಮೊದಲನೆಯದಾಗಿಃ** 1 ರಿಂದ 4 ಹಾಗೂ 6 ನೇ ಆರೋಪಿಗಳಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಪಾಂಡವಪುರ ಪೊಲೀ ಸರಹದ್ದಿಗೆ ಸೇರಿದ ವಿವಿ ನಗರದಲ್ಲಿ ಕೆ.ಇ.ಬಿ ಹಿಂಬಾಗ ಡಾಃಸತೀಶ್ ರವರ ಮನೆಯ ಮೊದಲನೆ ಹಂತದ ಮನೆಯಲ್ಲಿ ಬಾಡಿಗೆಮನೆಯಲ್ಲಿ ವಾಸವಿರುವ ಚಾಸಾ-1 ರವರಿಗೆ ಆರೋಪಿ 2 ರವರನ್ನು 16 ವರ್ಷಗಳ ಹಿಂದೆ ಸಾಂಪ್ರದಾಯಿಕವಾಗಿ ಮದುವೆಯಾಗಿ, ಇಬ್ಬರು ಸಂಸಾರದಲ್ಲಿ ಸಾಮರಸ್ಯದಿಂದಿದ್ದು, ಚಾಸಾ-1 ರವರು ಆರ್ಥಿಕವಾಗಿ ಮುಂದುವರೆಯುವುದನ್ನು ಸಹಿಸದೆ ಆರೋಪಿ 1 ರಿಂದ 4 ಮತ್ತು 6 ನೇ ಆರೋಪಿಗಳು ಚಾಸಾ-1 ರವರ ಆಸ್ತಿ ಮತ್ತು ಹಣ ಒಡವೆಗಳನ್ನು ಲಪಟಾಯಿಸುವ ಏಕ್ಕೋದ್ದೇಶದಿಂದ ಆರೋಪಿ 2 ರವರನ್ನು ಚಾಸಾ-1 ರವರ ಮಧ್ಯ ಕೌಟುಂಬಿಕ ಕಲಹವನ್ನು ತಂದು ಕುಟುಂಬದಲ್ಲಿ ಸಾಮರಸ್ಯವನ್ನು ಕದಡಿ ಆಗಾಗ ಚಾಸಾ-1 ಮತ್ತು ಆರೋಪಿ 2 ರಗರುಗಳ ನಡುವೆ ಕೌಟುಂಬಿಕ ಕಲಹಗಳು ನಡೆಯುತ್ತಿದ್ದು, ಈ ಸಂಬಂದ ಚಾಸಾ-7, 8, 9 ರವರುಗಳು ಪಂಚಾಯ್ತಿಯನ್ನು ನಡೆಸಿದರು ಕೌಟುಂಬಿಕ ಕಲಹದ ಸಂಬಂದ ಪಂಚಾಯ್ತಿ ನಡೆಯುತ್ತಿದ್ದಾಗ ಆರೋಪಿ 1 ರಿಂದ 4 ಮತ್ತು 6 ನೇ ಆರೋಪಿಗಳು ಅಕ್ರಮ ಗುಂಪು ಕಟ್ಟಿಕೊಂಡು ಬಂದಿರುತ್ತೀರಿ. **ಆ ಕಾರಣ ಆರೋಪಿತರಾದ ನೀವೆಲ್ಲರೂಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.**

**ಎರಡನೆಯದಾಗಿಃ** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, 1 ರಿಂದ 4 ಹಾಗೂ 6 ನೇ ಆರೋಪಿಗಳಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆರೋಪಿಗಳೆಲ್ಲಾರೂ ಚಾಸಾ-1 ರವರೊಂದಿಗೆ ಜಗಳ ತೆಗೆದು ಅವರಿಗೆ ಅವಮಾನವಾಗುವಂತೆ ಗಲಾಟೆ ಮಾಡಿರುತ್ತೀರಿ, **ಆ ಕಾರಣ ಆರೋಪಿತರಾದ ನೀವೆಲ್ಲರೂಭಾರತೀಯ ದಂಡ ಸಂಹಿತೆ**

**ಕಲಂ 147 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.**

**<u>ಮೂರನೆಯದಾಗಿಃ</u>** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, 1 ರಿಂದ 4 ಹಾಗೂ 6 ನೇ ಆರೋಪಿಗಳಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆರೋಪಿ 2, 3, 4 ಮತ್ತು 6 ರವರುಗಳು ಚಾಸಾ-1 ರವರನ್ನು ತಬ್ಬಿ ಹಿಡಿದುಕೊಂಡಿರುತ್ತೀರಿ, **ಆ ಕಾರಣ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.**

**<u>ನಾಲ್ಕನೆಯದಾಗಿಃ</u>** ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ, 1 ರಿಂದ 4 ಹಾಗೂ 6 ನೇ ಆರೋಪಿಗಳಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆರೋಪಿ 1 ರವರು ಚಾಸಾ-1 ರವರನ್ನುದ್ದೇಶಿಸಿ ಏನೋ ಬೋಳಿಮಗನೆ ಸೂಳೆಮಗನೆ ನಮ್ಮಗಳನ್ನು ನ್ಯಾಯ ಪಂಚಾಯ್ತಿಗೆ ಕರೆಸಿದ್ದೀಯ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. **ಆ ಕಾರಣ ಆರೋಪಿತರಾದ ನೀವೆಲ್ಲರೂ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.**

**<u>ಐದನೆಯದಾಗಿಃ</u>** ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ, 1 ರಿಂದ 4 ಹಾಗೂ 6 ನೇ ಆರೋಪಿಗಳಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆರೋಪಿ 1 ರವರು ಚಾಸಾ-1 ರವರಿಗೆ ಕೈಗಳಿಂದ ಮೈಮೇಲೆ ಎಡಬಾಗದ ಎದೆಗೆ ಮತ್ತು ಬಲಬಾಗದ ಎದೆಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ, ಆರೋಪಿ 3 ರವರು ಕಾಲಿನಿಂದ ಮೈಮೇಲೆ ಒದ್ದು ನೋವುಂಟು ಮಾಡಿರುತ್ತೀರಿ, **ಆ ಕಾರಣ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.**

<u>**ಆರನೆಯದಾಗಿ:**</u> ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ, 1 ರಿಂದ 4 ಹಾಗೂ 6 ನೇ ಆರೋಪಿಗಳಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆರೋಪಿ 2, 4, 6 ರವರುಗಳು ಈ ಬೋಳಿಮಗನನ್ನು ಬಿಡಬೇಡಿ ತಂದು ಕತ್ತರಿಸಿಹಾಕಿ ಎಂದು ಗಲಾಟೆಗೆ ಕುಮ್ಮಕ್ಕು ನೀಡಿರುತ್ತೀರಿ. **ಆ ಕಾರಣ ಭಾರತೀಯ ದಂಡ ಸಂಹಿತೆ ಕಲಂ 114 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.**

<u>**ಕೊನೆಯದಾಗಿ:**</u> ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ, 1 ರಿಂದ 4 ಹಾಗೂ 6 ನೇ ಆರೋಪಿಗಳಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆರೋಪಿ 2, 4, 6 ರವರುಗಳು ಈ ಬೋಳಿಮಗನನ್ನು ಬಿಡಬೇಡಿ ತಂದು ಕತ್ತರಿಸಿಹಾಕಿ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ. **ಆ ಕಾರಣ ಆರೋಪಿತರಾದ ನೀವೆಲ್ಲರೂಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.**

ಪ್ರ : ಕನ್ನಡದಲ್ಲಿ ಓದಿ ಹೇಳಲಾದ ದೋಷಾರೋಪಣೆಗಳು ಅರ್ಥವಾಯಿತಾ?

ಉ:

ಪ್ರ : ಆಪಾದನೆಯನ್ನು ಒಪ್ಪಿಕೊಳ್ಳುವಿರಾ, ಅಥವಾ ವಿಚಾರಣೆಯಾಗಬೇಕಾ?

ಉ :

**ಮೇಲ್ಕಂಡ ದೋಷಾರೋಪಣೆಯನ್ನು ಕನ್ನಡದಲ್ಲಿ ಓದಿ ಹೇಳಲಾಗಿದ್ದು, ಆರೋಪಿಗಳು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.**

**(ಕಿಶೋರ್ ಕುಮಾರ್ ಕೆ.ಎನ್)**
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
**ಪಾಂಡವಪುರ.**

<u>**ಆರೋಪಿಗಳ ಸಹಿ:**</u>